ಸಾಹೇಬ, 'ಆಯ್ಕೊಂಡು ತಿನ್ನೊ ಹಕ್ಕಿಗಳು, ಅವರಿಗ್ಯಾಕ ಕಳ್ಳತನ್ದ ಖಯಾಲಿ, ಅದೇನಿದ್ರ ಹಾದರದ ಮಕ್ಕಳ್ಗ' ಎಂದು ಖಾಕಿ ಬಟ್ಟೆಯಲ್ಲಿ ವೇದಾಂತಿಯಂತೆ ಹೇಳಿದ್ದು ಅಚ್ಚರಿ ಎನಿಸಿತು.

ಅಜ್ಜಿ ಅಪರೂಪಕ್ಕೆ ಕಾಯಿಲೆ ಬಿದ್ದರೆ ಅಜ್ಜನೇ ಅಜ್ಜಿಗೆ ನೀರು ಕಾಯಿಸಿ ಮೈ ಉಜ್ಜುತ್ತಿದ್ದ. ಅಜ್ಜಿಯ ಮುಟ್ಟು ಬಟ್ಟೆಯನ್ನು ಕುಂಟೆಯಲ್ಲಿ ತೊಳೆಯುತ್ತಿದ್ದ. ಅಜ್ಜಿ ಒಮ್ಮೆ ಭೇದಿ ಮಾಡಿಕೊಂಡಾಗಲೂ ಅಸಹ್ಯಪಡದೇ ಬಟ್ಟೆ ತೊಳೆಯುತ್ತಿದ್ದ. 'ಬ್ಯಾಡ ನಾನು ತೊಳಿತೀನಿ' ಎಂದ ಅಜ್ಜಿಗೆ, 'ಸುಮ್ಕಿರೆ ನಿನ್ನ ಅವ್ವ ಮೂರು ಮಕ್ಕಳ್ನ ಹೆತ್ತ ನನ್ನ ದೊರೆಸಾನಿ ಬಟ್ಟೆ ತೊಳಿದ್ರಾ ಆಕಾಸ್ದಾಗಿರೋ ನನ್ನ ಅಮ್ಮ ಪಿಚ್ಚಿ ಹರಸ್ತಾಳ' ಎನ್ನುತ್ತಿದ್ದ ಅಜ್ಜಿಗೆ ಅಳಿಲನ್ನು ಸುಟ್ಟು ತಿನ್ನಿಸುತ್ತಿದ್ದ.

ತನ್ನ ಮೂರು ಹೆಣ್ಣುಮಕ್ಕಳು ಬೆಳೆಯುತ್ತಿದ್ದಂತೆ ತಾತ ಆನೇಕಲ್ಲಿನ ಪಕ್ಕದ ಆಲದೇನಹಳ್ಳಿಯ ಊರ ಗುಡಿ ಪಕ್ಕಕ್ಕೆ ತನ್ನ ಗೂಡ್ಲನ್ನು ಬದಲಾಯಿಸಿಕೊಂಡು ಮುದುಕ ಅಂಕೇಗೌಡನ ಗೆಳೆತನ ಮಾಡಿಕೊಂಡ. ಅಂಕೇಗೌಡ ಬಹಳ ಹಿರೀಕ, ಸಂಜೆ ಗುಡಿ ಹತ್ತಿರ ಬಂದು ಭಂಗಿ ಹಂಚಿಕೊಂಡು ಅಜ್ಜಿಗೆ ಅಣ್ಣನಂತೆ ಪ್ರೀತಿ ತೋರುತ್ತಿದ್ದ. 'ಅವುನವ್ವ ಉಳ್ಳಿಕಾಳ ಸಾರು ತಿಂದೂ ಬರೀ ಹೂಸ ಜಾಸ್ತಿ ಆಗಾದೆ, ತತ್ತಾಳಿ ತಂಗೀ ಬಾಡಾಮ್ರಾನ, ಊರ ಜನಕ್ಕ ಕಾಣದಂಗ ಗುಟ್ಟಾಗಿ ಉಂಡು ಬೇಸ್, ಬೇಸ್...' ಎಂದು ಚಪ್ಪರಿಸುತ್ತಿದ್ದ. ಮುಂದೆ ಆಲದೇನಳ್ಳಿ ತೋಟಿ ಮಿಂಚಾಮ ಅಜ್ಜನ ಗೆಳೆಯನಾಗಿ ಬೇಟಿ ಮಾಂಸವನ್ನು ಹಂಚಿಕೊಳ್ಳುತ್ತಿದ್ದ.

ಒಂದು ದಿನ ಅಜ್ಜಿ, 'ಮಕ್ಕಳು ಬೆಳೆದಾವ, ಅದಕ್ಕ ಜೊತಿ ಮೂಗುತಿ ಕೊಡ್ಸಾö' ಎಂದು ಹೇಳಿ ಇದ್ದಪದ್ದ ದವಸ ಮಾರಿ ಹಾರಗದ್ದೆ ಪ್ಯಾಲಿಗೆ ಹೋಗಿ ದೊಡ್ಡ ಮಗು ಅಣ್ಣೆಮ್ಮನಿಗೆ ಮೂಗುತಿ ಮತ್ತು ಬೆಳ್ಳಿ ಕಾಸೊಂದನ್ನು ಕೊಂಡು, 'ಇದು ನಮ್ಮತ್ರ ಇರಾದು ಬ್ಯಾಡ, ನಿನ್ನತ್ರಾನ ಇರ್ಲಿ' ಎಂದು ಅಂಕೇಗೌಡನ ಹತ್ತಿರವೇ ಬಿಟ್ಟಿದ್ದರು.

ಕ್ವಾಲಾರದ ಸೀಮೆ ಗಾಡೆದ್ಲೋನ ಮಗ ಕಡಮಂಚಿ ಗಂಗಪ್ಪ ಅಜ್ಜನ ಹತ್ತಿರ ಹೆಣ್ಣು ಕೇಳಲು ಬಂದ. ಗೂಡ್ಲಿಗೆ ಬಂದ ಸರೀಕರಿಗೆ ಹೆಂಡ ಕುಡಿಸಿ, ತುನುಕು ತಿನಿಸಿ ರಾತ್ರಿ ದ್ಯಾವಸ್ಥಾನದ ಬಯಲಾಗ ಮಾತುಕತಿ ನಡೆದೋಯ್ತು. ಕುಲದ ಪದ್ಧತೀ ಅಂಗ ಮದ್ವಿ ಆಗೋ ಗಂಡು ಹೆಣ್ಣಿನ ತಂದೀ ಜೊತಿ ವರ್ಸ ಇರ್ಬೇಕು. ಅವನ ಬ್ಯಾಟೆ, ತೀಟಿ, ಹುಳಿ, ಉಪ್ಪು ಎಲ್ಲವನ್ನೂ ಪರೀಕ್ಷಿಸಿ ಮಗಳನ್ನ ಸಲುವುತಾನು ಎಂದು ಗ್ಯಾರಂಟಿ ಮಾಡಿಕೊಂಡು ಮಗಳನ್ನು ಕೊಡುವುದು ಕುಲದ ನೀತಿ. ಇದನ್ನು 'ರೈತಂಗು' ಎನ್ನುವುದು ವಾಡಿಕೆ. ಅದರಂಗ ಕಡಮಂಚನ್ನ ಗಂಗನ್ನನ ಮಗ ಕರೀದುಬ್ಬ ಅಜ್ಜನತ್ತಿರ ರೈತಂಗು ಮಾಡಿ ಯಶಸ್ವಿಯಾದಾಗ ಆನೇಕಲ್ಲಿನ ಸಂತೆ ಮಾಳದಲ್ಲಿ ಸಂಜೆ ದೊಡ್ಡಮ್ಮ ಅಣ್ಣೆಮ್ಮನಿಗೆ ಲಗುನವಾಯಿತು. ಆ ರಾತ್ರಿ ಅಜ್ಜ ಎಲ್ಲರಿಗೂ ಕುಡಿಸಿದ. ಕೆಲವರು ಸಂತೆಮಾಳದ ಬಯಲಲ್ಲೇ ಮಲಗಿದರೆ ಗಂಗನ್ನನ ಬಳಗ ಆಲದೇವನಹಳ್ಳಿಯ ಗುಡಿ ಬಯಲಿಗೆ ಬಂದಿತ್ತು.

ಮದುವೆ ಆದದ್ದೆ ತಡ ಕಡಮಂಚಿ ಗಂಗನ್ನ ಮಗಸೊಸೆಯನ್ನು ಕರೆದುಕೊಂಡು ಕೆಳಗಿನ ಸೀಮೆಗೆ ನಡೆಯಲು ಸಿದ್ಧವಾದ. ಅಜ್ಜ ಕಣ್ಣೀರಿಡುತ್ತಾ, 'ಮತ್ತ ಮಗ್ಳು ಯಾವ ಕಾಲಕ್ಕ ಕಾಣಿಸ್ತಾದೋ' ಎಂದಾಗ, 'ಬರೋ ಉಗಾದೀಕ ಹೊಸೂರು ಬೆಟ್ಟದ ಜಾತ್ರೀಕ ಸೇರೋಣ' ಎಂದಷ್ಟೆ ಗಂಗಪ್ಪ ಹೇಳಿದ.

ಈ ನಡುವೆ ಅಂಕೇಗೌಡನಿಗೆ ಲಕ್ವಾ ಹೊಡೆಯಿತು. ಮಾತನಾಡಲು ಆಗದ ಅಂಕೇಗೌಡ ಅಜ್ಜಿಯನ್ನು ನೋಡಿದರೆ ಕಣ್ಣೀರಿಡುತ್ತಿದ್ದ. ಹಾರಗದ್ದೆಯಲ್ಲಿ ಕೊಂಡ ಬೆಳ್ಳಿಕಾಸಿನ ವಿಷಯದ ಬಗ್ಗೆ ಅಜ್ಜ ಪ್ರಸ್ತಾಪಿಸಿದರೆ ಅಂಕೇಗೌಡ ಮೇಲಕ್ಕೆ ಕಣ್ಣು ಬಿಡುತ್ತಿದ್ದ.